**ದಿನಾಂಕಃ 23-02-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲು:1 ಮತ್ತು 2 ನೇ ಎದುರುದಾರ ಪರ ಶ್ರೀ RMH ಮಾನ್ಯ ವಕೀಲರಿಂದಃ**

ಸದರಿ ಅಪಘಾತವಾದ ಸಂದರ್ಭದಲ್ಲಿ ಶಹಾಪೂರಿಲ್ಲಿರುವ ನನ್ನ ಮನೆಯಲ್ಲಿದ್ದೆ. ಸದರಿ ಅಪಘಾತ ಯಾವ ರೀತಿಯಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವಾದ ವಿಚಾರವನ್ನು ತಿಳಿದು ನಾನು ಶಹಾಪೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸದರಿ ಅಪಘಾತಕ್ಕಾದಂತೆ ನನ್ನ ಅಕ್ಕ ಶ್ರೀಮತಿ ಭೀಮಬಾಯಿ ಇವರು ಸದರಿ ಆಸ್ಪತ್ರೆಯಲ್ಲಿ ಪೊಲೀಸರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನಲ್ಲಿ ಏನು ಬರೆಯಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ಸದರಿ ದೂರನ್ನು 2 ನೇ ಎದುರುದಾರರ ಮೇಲೆ ಸಲ್ಲಿಸಲಾಗಿರುತ್ತದೆ. ಸದರಿ ಅಪಘಾತವನ್ನು ಸದರಿ ಭೀಮಬಾಯಿ ಇವರೂ ಕೂಡಾ ಪ್ರತ್ಯಕ್ಷವಾಗಿ ನೋಡಿರುವುದಿಲ್ಲ ಎಂದರೆ ಸರಿ. ಸದರಿ ದಿನದಂದು ಸದರಿ 2 ನೇ ಎದುರುದಾರರು ಯಾವುದೇ ಗಾಡಿಯನ್ನು ಓಡಿಸುತ್ತಿರಲಿಲ್ಲ ಹಾಗೂ ನನ್ನ ತಂದಗೆ ಯಾವುದೇ ಡಿಕ್ಕಿ ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು 1 ಹಾಗೂ 2 ನೇ ಎದುರುದಾರನ್ನು ನೋಡಿರುತ್ತೇನೆ. 2 ನೇ ಎದುರುದಾರರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. 1 ಮತ್ತು 2 ನೇ ಎದುರುದಾರರು ಹಳಿಸಗರದಲ್ಲಿ ವಾಸ ಮಾಡುತ್ತಾರೆ. 1 ಮತ್ತು 2 ನೇ ಎದುರುದಾರರ ಮನೆ ಶಹಾಪೂರಿನ ಬಸವೇಶ್ವರ ನಗರದಲ್ಲಿರುತ್ತದೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸ ಮಾಡದ ಕಾರಣ ಅಪಘಾತವಾದ ದಿನದಂದು 2 ನೇ ಎದುರುದಾರರು ನಡೆಸುತ್ತಿದ್ದ ವಾಹನ ನಂಬರ ನನಗೆ ಹೇಳಲು ಬರುವುದಿಲ್ಲ. ಸದರಿ ಅಪಘಾತವಾದ ಸಂದರ್ಭದಲ್ಲಿ ನನ್ನ ಮೃತ ತಂದೆಯ ವಯಸ್ಸು 70 ಆಗಿತ್ತು ಎಂದರೆ ಸರಿ ಹಾಗೂ ಅವರು ಯಾವುದೇ ಕೆಲಸವನ್ನು

ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರು ತಮ್ಮ ಜೀವಿತ ಕಾಲಾವಧಿಯಲ್ಲಿ ಹಮಾಲಿ ಕೆಲಸವನ್ನು ಗಂಜನಲ್ಲಿ ಯಾರು ಕೆಲಸ ಹೇಳುತ್ತಾರೋ ಅವರ ಹತ್ತಿರ ಕೆಲಸ ಮಾಡಿಕೊಂಡಿದ್ದರು. ನನ್ನ ಮೃತ ತಂದೆಗೆ ವಯಸ್ಸಾಗಿದ್ದರಿಂದ ಅವರು ಯಾವುದೇ ಹಮಾಲಿ ಕೆಲಸ ಮಾಡುತ್ತಿರಲಿಲ್ಲ ಹಾಗೂ ರೂ.20,000/- ಗಳ ಆದಾಯವನ್ನು ಹೊಂದದೇ ಇದ್ದರೂ ಕೂಡಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ಮದ್ಯಪಾನ ಮಾಡುವ ಚಟವಿದ್ದು ಹಾಗೂ ಅವರಿಗೆ ದಮ್ಮು, ಕೆಮ್ಮು ಇತ್ತು ಎಂದರೆ ಸರಿಯಲ್ಲ ಹಾಗೂ ಅವರಿಗೆ ನಡೆಯಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ದಿನದಂದು ಶಹಾಪೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ತಂದೆಯನ್ನು ದಾಖಲು ಮಾಡಿದ್ದು ನಂತರ ನಾವು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಕಲಬುರಗಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆದರೆ ನನಗೆ ಸದರಿ ಆಸ್ಪತ್ರೆಯ ಹೆಸರು ಗೊತ್ತಿರುವುದಿಲ್ಲ. ಸದರಿ ಕಲಬುರಗಿಯ ಆಸ್ಪತ್ರೆಯಲ್ಲಿ ನನ್ನ ಮೃತ ತಂದೆಯವರು ನಾಲ್ಕು ದಿನಗಳವರೆಗೆ ಒಳರೋಗಿಯಾಗಿ ದಾಖಲಾಗಿದ್ದರು. ಸದರಿ ಆಸ್ಪತ್ರೆಯಲ್ಲಿದ್ದಾಗ ನನ್ನ ತಂದೆಯ ಆಸ್ಪತ್ರೆಯ ಖರ್ಚನ್ನು ನಾನೆ ನೋಡಿಕೊಂಡಿದ್ದು ಆದರೆ ಎಷ್ಟು ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ತಮ್ಮ ತಮ್ಮ ಖರ್ಚು ಮಾಡಿರುವುದಾಗಿ ಹೇಳುತ್ತಾರೆ. ನಾವು ಮನೆಯನ್ನು ಖಾಲಿ ಮಾಡುವಾಗ ಸದರಿ ಬಿಲ್ಲುಗಳು ಕಳೆದಿರುತ್ತವೆ. ನಾನು ಸದರಿ ಬಿಲ್ಲುಗಳನ್ನು ನೋಡಿರುತ್ತೇನೆ. ನಮ್ಮ ತಂದೆಗೆ ವೈದ್ಯಕೀಯ ಖರ್ಚನ್ನು ಒಬ್ಬ ಶ್ರೀ ನಿಂಗಪ್ಪ ನಾಯ್ಕೋಡಿ ಇವರು ಎದುರುದಾರರಿಂದ ಒತ್ತಾಯಪೂರ್ವಕವಾಗಿ ಕೊಡಿಸಿರುತ್ತಾರೆ ಎಂದರೆ ಸರಿಯಲ್ಲ.

2. ಸದರಿ ಅಪಘಾತವಾಗುವಲ್ಲಿ ಎದುರುದಾರರ ಯಾವುದೇ ತಪ್ಪು ಇಲ್ಲದೇ ಇದ್ದರೂ ಕೂಡಾ ನನ್ನ ಅಕ್ಕ ಹಾಗೂ ತಮ್ಮ ಸೇರಿ ಅವರುಗಳ ಮೇಲೆ ಸುಳ್ಳಾದ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಪ್ರಸ್ತುತ ಅಪಘಾತದ ಬಗ್ಗೆ ಹಾಗೂ ಯಾವುದೇ ಬಿಲ್ಲುಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ನನ್ನ

ತಮ್ಮ ನನಗೆ ತಿಳಿಸಿರುತ್ತಾರೆ. ನನ್ನ ಸದರಿ ತಮ್ಮ ಈಗ್ಗೆ 2 ವರ್ಷಗಳ ಹಿಂದೆ ಮೃತ ಹೊಂದಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ನಾವು ಪರಿಹಾರದ ಹಣವೆಂದು ರೂ.16,00,000/- ಗಳನ್ನು ಕೇಳಿರುತ್ತೇವೆ. ಸದರಿ ರೂ.16,00,000/ ಗಳ ಪರಿಹಾರದ ಹಣವನ್ನು ಯಾವ ಯಾವ ಕಾರಣಕ್ಕಾಗಿ ಕೇಳಿರುತ್ತೇವೆ ಎಂದರೆ ನನಗೆ ಗೊತ್ತಿರುವುದಿಲ್ಲ. ಎದುರುದಾರರಿಂದ ಪರಿಹಾರದ ಹಣವನ್ನು ಪಡೆಯಲು ಸುಳ್ಳಾದ ಪ್ರಸ್ತುತ ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.